''ನನ್ನಿಂದ ದೊಡ್ಡ ತಪ್ಪಾಯಿತು ಅಮ್ಮೋರೆ... ತಿಳಿಯದೆ ಮನೆಯೊಳಗೆ ಬಂದು ಬಿಟ್ಟೆ. ಸಮಗಾರನ ಬುದ್ಧಿಮಟ್ಟ ಇನ್ನೆಷ್ಟು?... ಅಷ್ಟು ತಿಳಿವಳಿಕೆ ಇದ್ದಿದ್ದರೆ ಒದೆ ಯಾಕೆ ತಿನ್ನುತ್ತಿದ್ದೆ ಹೇಳಿ...'' ಎಂದು ದುಖಿ ತನ್ನ ನಿಸ್ಸಹಾಯಕತೆ ತೋಡಿಕೊಂಡ. ಚಿಮ್ಮಟದಲ್ಲಿ ತಂದ ಕೆಂಡವನ್ನು ಅವಳು ಮಾರು ದೂರದಿಂದಲೇ ಅವನ ಮುಖದೆಡೆಗೆ ಒಗೆದಳು. ದುಖಿ ತಲೆ ಮೇಲೆ ಕೆಂಡದ ಕಿಡಿಗಳ ಪ್ರೋಕ್ಷಣವಾಯಿತು. ಅವನು ಕೂಡಲೇ ಹಿಂದಕ್ಕೆ ಸರಿದು ತಲೆ ಝಾಡಿಸಿ ಬೆಂಕಿಯ ಸುಡುವಿಕೆಯಿಂದ ತಪ್ಪಿಸಿಕೊಂಡ.

'ಪವಿತ್ರ ಬ್ರಾಹ್ಮಣರ ಮನೆಯನ್ನು ಮೈಲಿಗೆ ಮಾಡಿದ ಫಲವಿದು' ಎಂದು ಮನದಲ್ಲಿಯೇ ಹೇಳಿಕೊಂಡ. ದೇವರು ಇಷ್ಟು ಬೇಗ ಪ್ರತಿಕ್ರಿಯೆ ನೀಡಿದನಲ್ಲಾ!... ಅದಕ್ಕೇ ಇರಬೇಕು ಕುಟುಂಬದವರು ಬ್ರಾಹ್ಮಣ ಪಂಡಿತರಿಗೆ ಅಷ್ಟೊಂದು ಹೆದರೋದು... ಎಲ್ಲರೂ ದಕ್ಷಿಣೆ ನೀಡಿ ಹಣ ಕಳೆದುಕೊಳ್ಳೋದು... ಬ್ರಾಹ್ಮಣರ ಗಂಟು ಯಾರಾದರೂ ಹೊಡೆಯಲಿಕ್ಕೆ ಸಾಧ್ಯನಾ?... ತನ್ನಿಂದಲೇ ಮನೆಯ ಸತ್ಯ ನಾಶವಾಯಿತೇನೋ!?

ಅವನ ಕಾಲುಗಳು ನಿಶ್ಶಕ್ತಿಯಲ್ಲಿ ನಡುಗತೊಡಗಿದವು. ಹೊರಗೆ ಬಂದು ಚಿಲುಮೆ ಹೊತ್ತಿಸಿ ಸೇದಿದ. ದಮ್ಮು ಎಳೆದು ಮತ್ತೆ ಕೊಡಲಿ ಕೈಗೆ ತೆಗೆದುಕೊಂಡ. ಕೆಲಸದಲ್ಲಿ ತೊಡಗಿದ. ಖಟ್ ಖಟ್ ಸದ್ದು ಮೊಳಗತೊಡಗಿತು.

**ಕೊಡಲಿ ಕೈಗೆ ಎತ್ತಿಕೊಂಡ. ಹೇಳಬೇಕೆಂದುಕೊಂಡ ಮಾತುಗಳನ್ನೇ ಮರೆತು ಬಿಟ್ಟ. ಖಾಲಿ ಹೊಟ್ಟೆಯಲ್ಲಿ ಬುದ್ಧಿ ಕೆಲಸಕ್ಕೆ ಬಾರದಂತಾಯಿತು. ಮುಖ ಮಾರ್ಜನಕ್ಕೂ ಅವಕಾಶವಾಗದೆ ಬೆಳಗ್ಗೆಯಿಂದ ನೀರು ಕುಡಿಯದೇ ಅವಸರವಾಗಿ ಹೊರಟು ಬಂದಿದ್ದ. ಕೈಕಾಲು ಆಡಿಸುವುದೇ ದುಸ್ತರವಾಯಿತು.**

ತಲೆಯ ಮೇಲೆ ಬೆಂಕಿ ಸುರಿದ ದೃಶ್ಯ ನೆನಪಿಸಿಕೊಂಡ ಪಂಡಿತರ ಮಡದಿಗೆ ಅವನ ಮೇಲೆ ಒಂದಿಷ್ಟು ದಯೆ ಬಂತು. ಪಂಡಿತರು ಊಟ ಮುಗಿಸಿ ಮೇಲೇಳುತ್ತಿದ್ದಂತೆ,

''ಈ ಸಮಗಾರನಿಗೆ ಒಂದಿಷ್ಟು ಊಟ ಕೊಟ್ಟರೆ ಹೇಗೆ?... ಬೆಳಗ್ಗೆಯಿಂದ ಹಸಿವೆಯಿಂದಲೇ ಕೆಲಸ ಮಾಡುತ್ತಿದ್ದಾನಲ್ಲಾ!?...'' ಎಂದಳು. ಪಂಡಿತರು ಅವಳ ಮಾತಿಗೆ ಜಿಜ್ಞಾಸೆ ತೋರಿ,

''ರೊಟ್ಟಿ ಇವೆಯಾ?...'' ಎಂದರು.

''ಒಂದೆರಡು ಮೂರು ಉಳಿದಿರಬಹುದು...'' ಎಂದಳು.

''ಎರಡು ಮೂರು ರೊಟ್ಟಿ ಅವನಿಗೇನಾದೀತು... ಅವನು ಸಮಗಾರ... ಕನಿಷ್ಠ ಸೇರು ಹಿಟ್ಟಿನ ರೊಟ್ಟಿಯಾದರೂ ಬೇಕು...''

''ಅಬ್ಬಾ!... ಅಷ್ಟೊಂದು ತಿಂತಾರಾ?... ಹಾಗಿದ್ದರೆ ಬೇಡ ಬಿಡಿ,'' ಎಂದು ಮಡದಿ ಕಿವಿಯ ಮೇಲೆ ಕೈ ಇಟ್ಟುಕೊಂಡು ಹೇಳಿದಳು.

''ಒಂದಿಷ್ಟು ಹೊಟ್ಟು ಹಿಟ್ಟಿನಲ್ಲಿ ಸೇರಿಸಿಕೊಡು, ಆಗ ನನ್ನ ಮಗಂದು ಹೊಟ್ಟೆ ತುಂಬಬಹುದು.